# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

## ಸಿ.ಸಿ ಸಂಖ್ಯೆ: 1380/2022

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಮಧು | ಸಿಡಬ್ಲ್ಯೂ-8 |
| ತಂದೆಯ/ಗಂಡನ ಹೆಸರು | – | ತಿಮ್ಮಣ್ಣ | ಪಿಡಬ್ಲ್ಯೂ-5 |
| ವಯಸ್ಸು | – | ಸು.26 ವರ್ಷ | ಪ್ರ.ವ.ಬೋ ದಿನಾಂಕ:20.03.2025 |
| ಉದ್ಯೋಗ | – | ವ್ಯವಸಾಯ | |
| ವಾಸ | – | ಪಿ ಡಿ ಕೋಟೆ ಗ್ರಾಮ | |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ:-**

1. ಸಾಕ್ಷಿಯು ನಿಪಿ-4 ಮತ್ತು 5 ರಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ-4(ಸಿ) ಮತ್ತು 5(ಸಿ)** ಎಂದು ಗುರುತಿಸಲಾಯಿತು. ನಿಪಿ-4 ಮತ್ತು 5 ಕ್ಕೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ ಹಾಗೂ ಯಾವುದೇ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನಿಪಿ-4 ಮತ್ತು 5 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ-ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ-ಸವಾಲಿನಲ್ಲಿ ಕೇಳುವ ಪ್ರಶ್ನೆಗಳನ್ನು ಕೇಳಲು ಅನುಮತಿ ನೀಡಲಾಯಿತು).

**ಪಾಟೀ-ಸವಾಲು: ಮಾನ್ಯ ಎಪಿಪಿ ಯವರಿಂದ:-**

1. ದಿ:20.05.2022 ರಂದು ಅಬ್ಬಿನಹೊಳೆ ಪೋಲಿಸರು ನನ್ನನ್ನು ಮತ್ತು ಚಾಸಾ-7 ರವರನ್ನು ಅಪಘಾತ ನಡೆದ ಸ್ಥಳಕ್ಕೆ ಬರಮಾಡಿಕೊಂಡು ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ನಿಪಿ-4 ರಂತೆ ಪಂಚನಾಮೆಯನ್ನು ಹಾಗೂ ನಿಪಿ-5 ರಂತೆ ಕಚ್ಚಾ ನಕಾಶೆ ಯನ್ನು ತಯಾರಿಸಿ ಅಪಘಾತಕ್ಕೊಳಗಾಗಿದ್ದ KA-02-EH-4137 ಹಾಗೂ KA-16-X-5862 ಮೋಟಾರ್ ಸೈಕಲ್ ಗಳ ನ್ನು ಅಮಾನತ್ತು

ಪಡಿಸಿಕೊಂಡರು ಎಂದರೆ ಸರಿಯಲ್ಲ. ನಿಪಿ–4 ಮತ್ತು 5 ರಲ್ಲಿರುವ ವಿಚಾರಗಳು ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ–ಸವಾಲುಃ ಆರೋಪಿ ಪರ ಶ್ರೀ. ಸಿ ಎಸ್ ವಕೀಲರಿಂದಃ**

ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.